ಮೈಸೂರ ಗೆಜೆಟ.

ನಂ. 43. ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1889.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 26, ಸನ್ 1889.

ಈ ಭಾಗವನ್ನು ಪ್ರತ್ಯೇಕ ನೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾನಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂವೆಟ್ರೋಲರವರು, ಪಬ್ಲಿಕ್ ವರ್‌ಕ್ಸ್ ಆಫಿಸರಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಶನ್ಸ್ ಜಡ್ಜಿರು, ಡಿ|| ಪೆಷ್ಕುಟ್ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪೆಕ್ಟಸ್ ನೋಟಿಸುಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸಗಳು ವ ರೆಗ್ಯುಲೇರ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೆ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 19ನೇ ಸಪ್ಟಂಬರ್ 1889.

ನಂ. 189.—ಸನ್ 1881ನೇ ಇಸವಿಯ ಎಕ್ಸೈಜ್ ಆಕ್ಟಿನ 3ನೇ ಸೆಕ್ಷನ್ ಅನುಸರಿಸಿ, ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ತಿಳಿಯಪಡಿಸುವದೇನಂದರೆ, (1885ನೇ ಇಸವಿಯ 11ನೇ ರೆಗ್ಯೂಲೇರ್ಷ ಯಂಬ) 1863ನೇ ಇಸವಿಯ XVIನೇ ಆಕ್ಟಿನ ಮೇರಿಗೆ ಮನುಷ್ಯರು ಕುಡಿಯುವದಕ್ಕೆ ಲಾಯಕ್ಕು ಯಿಲ್ಲದಂತೆ ಮಾಡಲ್ಪಟ್ಟ ಮೆಥಿಲೇಟೆಡ್ ವ ಯಲ್ಲ ಸ್ಪಿರಿಟ್ ಸಾರಾಯಿಯನ್ನೂ, ಸದರೀ ಆಕ್ಟಿನ ಪುದ್ದೇಶಗಳಿಗಾಗಿ "ಬಳದೇಶದ ಸಾರಾಯಿ" ಯಂತೆಯೇ ಯೆಣಿಸಲ್ಪಡತಕ್ಕದ್ದು.

ನಂ. 196.—ಇದರಡಿ ಕಂಡ ಗ್ರಾಮಗಳ ವರ್ಗಾವರ್ಗಿಯನ್ನ ಅಪ್ಪಣೆ ಮಾಡೋಣಾಗಿರುತ್ತದೆ.

ನಂಬರ್.	ಮೂಗಣಿ.	ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ ವರ್ಗ.
1	2	3	4	5
1	ವಕ್ಕಲೇರಿ	ಲಕ್ಷ್ಮೀಸಾಗರ	ಕೋಲಾರ	ಮಾಲೂರು
2	ದೆಳಸನೂರು	ಘನಸಜೆಂದನಹಳ್ಳಿ	ಡಿಟೋ	ಚಿಂತಾಮಣಿ

ನಂ. 195.—ಕೋಲಾರ ತಾಲ್ಲೂಕು ಪೈಕಿ ಇದರಡಿ ಕಂಡ ತಟ್ಟೆಯಲ್ಲಿ ನಮೂದಾಗುವ ಗ್ರಾಮಗಳು ಅವುಗಳ ಆಜೂಬಾಜೂ ಗ್ರಾಮಗಳಿಗೆ ಕೀರತಕ್ಕದ್ದೆಂದು ಯಿದರಿಂದ ಸಮಸ್ತ ಜನಗಳಿಗೂ ತಿಳಿದುಪಡಿಸೋಣಾಗಿರುತ್ತದೆ.

ಮಾಗಣಿ.	ನಂಬರ್.	ಕಾಯಂ ಇರತಕ್ಕ ಗ್ರಾಮಗಳು.	ನಂಬರ್.	3ನೇ ವೇಸ್ತಕಿನಲ್ಲಿ ನಮೂದಾಗುವ ಗ್ರಾಮಗಳಿಗೆ ಕೀರಿಸಲ್ಪಡತಕ್ಕ ಗ್ರಾಮಗಳ ಹೆಸರು.
1	2	3	4	5
ಹೆತ್ತೂರು ..	1	ಹೊಟ್ಟಗನಹಳ್ಳಿ ..	1	ಅಗ್ರಹಾರದಿನ್ನೆ
	2	ಮಾಲಂದಹಳ್ಳಿ ..	1	ರಾಂಪುರದಿನ್ನೆ
	3	ಪಟ್ಟಣ ..	1	ಆಲಿಕುಂಟೆ
			2	ೀತಿಗುಟ್ಟ
	4	ತಿಪ್ಪಸಂದ್ರ ..	1	ಹೊಸೂರು
ಹೊಲ್ಲೂರು ..	5	ಹೊಲ್ಲೂರು ..	1	ಸಾಂಬಾಪುರ
	6	ಚಿಕ್ಕಕುರಬರಹಳ್ಳಿ ..	1	ಕದರಕುಂಟೆ
	7	ಬಾಡೆರಿ ..	1	ಜೆಗನೆನಹಳ್ಳಿ
	8	ದಾದಿರಡ್ಡಿಹಳ್ಳಿ ..	1	ಜಾಡೆರಿಯಿಂದ ಪ್ರತ್ಯೇಕಿಸಲ್ಪಟ್ಟಭಾಗ
ದಳಸನೂರು ..	9	ಯಿಡಹಳ್ಳಿ ..	1	ಕಾಳಿಪುರ
	10	ಕುಡುವನಹಳ್ಳಿ ..	1	ಚನ್ನಾಪುರ
ವಕ್ಕಲೇರಿ ..	11	ವಕ್ಕಲೇರಿ ..	1	ಗಂಗಾಪುರ
			2	ದಾಸರಹಳ್ಳಿ
	12	ಕೋಡಿಹಳ್ಳಿ ..	1	ಸೋಮೆನಹಳ್ಳಿ
	13	ತಿರುಮಲಕೊಪ್ಪ ..	1	ಬನವಾಸಿಪುರ
	14	ದೊಡ್ಡಹಾಯೂರು ..	1	ಲಕ್ಷ್ಮೀನಾರಾಯಣಪುರ
ಕೋಲಾರ ..	15	ಕುರುಬರಹಳ್ಳಿ ..	1	ಭೈರಡ್ಡಿಹಳ್ಳಿ
	16	ದೆಗಲಿಪೆಲಚನಹಳ್ಳಿ ..	1	ಶ್ರೀಕಾಂತಪುರ
ಸುಗಟೂರು ..	17	ಗೊಟ್ಟಹಳ್ಳಿ ..	1	ಬೂದಿಹಾಳ್
	18	ಮಾದನಹಳ್ಳಿ ..	1	ಗಣೇಕಪುರ
	19	ಸೋಮಾಂಬುಧಿ ಅಮಾನೀಕೆರೆ ..	1	ಬೊಂತಿಗನಹಳ್ಳಿ
ವೇಮಗಲ್ಲು ..	20	ಮೂರಚನಹಳ್ಳಿ ..	1	ಈಚಗುರಕಿ
	21	ಈರಗಸಂದ್ರ ..	1	ತಿಮ್ಮಾಪುರ
	22	ಚನ್ನಪ್ಪನಹಳ್ಳಿ ..	1	ಕುರುಬರಹಳ್ಳಿ
	23	ಕಮಂಡಹಳ್ಳಿ ..	1	ಹುಣಸೇನಹಳ್ಳಿ
	24	ಕಿಂಗಹಳ್ಳಿ ..	1	ಯಲುವಹಳ್ಳಿ
	25	ಸಜ್ಜನಹಳ್ಳಿ ..	1	ಅಂಕೊಂಡನಹಳ್ಳಿ
	26	ೀತಿ ..	1	ಹೊಸೂರು
			2	ಕಲವಿನಾಯಕನಹಳ್ಳಿ
	27	ಹುಲನಕಲ್ಲೂರು ..	1	ಹೊಲೇರಹಳ್ಳಿ
			2	ಸರ್ಕಾರಪರಚನಹಳ್ಳಿ
	28	ಬೆಟ್ಟಹಸಪುರ ..	1	ಹಳೇಹೊಸಪುರ
	29	ಕೃಷ್ಣಾಪುರ ..	1	ಅತ್ತೀಮರದದಿನ್ನೆ
	30	ಮಡಿವಾಳ ..	1	ಸುಲದೇನಹಳ್ಳಿ
	31	ಮಲ್ಲಯ್ಯಪ್ಪನಹಳ್ಳಿ ..	1	ಮಲ್ಲಯ್ಯಪ್ಪನಹಳ್ಳಿ ಅಮಾನೀಕೆರೆ
ಸುಗಟೂರು ..	32	ಬುಸನಹಳ್ಳಿ ..	1	ಕಿಂಗರಡ್ಡಿಹಳ್ಳಿ

ತಾರೀಖು 20ನೇ ಸೆಪ್ಟಂಬರ್ 1889.

ನಂ. 197.—ಸ್ರ್ 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ ಆಕ್ಟಿನ 6ನೇ ಸೆಕ್ಷನ್ ಅನುಸಾರಿಸಿ, ಇದರದೆಕೆಯಿಂದ ಪ್ರಕಟಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಪೈಕಿ ಚಿಕ್ಕಬಳ್ಳಾಪುರದ ಕಸಬೆಯಲ್ಲಿರುವ ಇದರಡಿಬರುವ ತಟ್ಟೆಯಲ್ಲಿ ನಮೂದಾಗುವ ಅಂಗಡಿಗಳು, ಖಾಲಿ ನಿವೇಶನಗಳು ವಗೈರೆಯು ಸರ್ಕಾರದ ಕೆಲಸಕ್ಕಾಗಿ ಬೇಕಾಗಿರುತ್ತದೆ.

ನಂಬರ.	ಇರತಕ್ಕ ಪ್ರದೇಶ.	ಮೂಲೀಕನ ಹೆಸರು.	ವಿಸ್ತೀರ್ಣ.		ವಿವರಣಿ.	ಯಾವ ಕೆಲಸಕ್ಕಾಗಿ ಬೇಕಾಗಿರುತ್ತೆ.	ಚಕ್ಕುಬಂದಿ.
			ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.			
			ಗಜ.	ಗಜ.			
1	ಪ್ಯಾಟೆ ಜನೈಕದಲ್ಲಿ ಕೋ ದಂಡರಾಮಸ್ವಾಮಿ ಬ್ಯಾಂಕ್ಯಯ್ಯಪ್ಪ ಇರುವ ಅಂಗಡಿ	ನಗರ್ತಪೇಟೆ ಪಟ್ಟಿ ಅಂಗಡಿ	9¼	3	ತಕ್ತಪೋಷ್ 6 ಅಂಕಣದ ಮಾಳಿಗೆ ಗೋಡೆ ವಗೈರೆ ಸುಟ್ಟ ಇಟ್ಟಿಗೆ ಸುಣ್ಣದ ಕೆಲಸದ ಬಾಬತ್ತು	ದೊಡ್ಡಪೇಟೆ ಬೀದಿಯಿಂದ ಕೋಟೆಗೆ ರಸ್ತೆ ಹಾತಕ್ಕೆ ಬಗ್ಗೆ	ಪೂರ್ವಕ್ಕೆ—ನಗರ್ತಪೇಟೆ, ಪಶ್ಚಿಮಕ್ಕೆ—ದೊಡ್ಡಮುನಿಯಪ್ಪನಖಾಲಿ ನಿವೇಕನ, ಉತ್ತರಕ್ಕೆ—ಡಿಟೋ ಅಂಗಡಿ, ದಕ್ಷಿಣಕ್ಕೆ—ಡಿಟೋ ಅಂಗಡಿ
2	ಡಿಟೋ ಅಂಗಡಿಗೆ ಸ್ವತ್ತರ ಡಿಟೋ	ದೊಡ್ಡಮುನಿಯ	9¼	3	ಜಂತೆ ಪಾಕದ 6 ಅಂಕಣ ಮಾಳಿಗೆ	ಡಿಟೋ ಡಿಟೋ	ಪೂರ್ವಕ್ಕೆ—ಪಬ್ಲಿಕ ರಸ್ತೆ—ಪಶ್ಚಿಮಕ್ಕೆ ದೊಡ್ಡಮುನಿಯಪ್ಪನ ಕಟ್ಟಣ—ಉತ್ತರಕ್ಕೆ ಹಳೇ ತಾಲ್ಲೂಕು ಕಚೇರಿ ಕಟ್ಟಣ—ದಕ್ಷಿಣಕ್ಕೆ ಅಂಣಯ್ಯಪ್ಪನ ಅಂಗಡಿ
3	ಡಿಟೋ ಅಂಗಡಿಗೆ ಹಿಂ ಭಾಗವಲ್ಲಿರುವ ಖಾಲೀ ಜಾಗಾ	ಡಿಟೋ	23	5½	ಖಾಲೀ ಜಾಗಾ	ಡಿಟೋ	ಪೂರ್ವಕ್ಕೆ—ದೊಡ್ಡಮುನಿಯಪ್ಪ ವ ಅಂಣಯ್ಯಪ್ಪನ ಅಂಗಡಿ—ಪಶ್ಚಿಮಕ್ಕೆ—ಹಳೇ ತಾಲ್ಲೂಕು ಕಚೇರೀ ಹಿತ್ತಲು—ಉತ್ತರಕ್ಕೆ—ಹಳೇ ತಾಲ್ಲೂಕು ಕಚೇರಿ—ದಕ್ಷಿಣಕ್ಕೆ—ದೊಡ್ಡಮುನಿಯಪ್ಪನ ಖಾಲೀ ನಿವೇಕನ
4	ಹಳೇ ತಾಲ್ಲೂಕು ಕಚ್ಚೇರಿ	ಕೆನ್ನಿಕಟ್ಟೆಪ್ಪನ ಪುಟ್ಟಣ್ಣ	35—1	27¾	ಇದರಲ್ಲಿ ಭಾವಿ ವ ಅಂಗಳ ಇದೆ ಸುಮಾರು 160 ಅಂಕಣನ್ನೆಳ್ಳ ಜಂಗ್ಲಿ ಸುಮಾರು ಹಾಕಿದ ಮಂಣು ಮಾಳಿಗೆ ಮನೆ ಈ ಪೈಕಿ 6 ಅಂಕಣಕ್ಕೆ ಹೆಂಚು ಹೊದಿಸಿ ಇವೆ 23 ಅಂಕಣ ಕಲ್ಲುಮಾಳಿಗೆ	ಡಿಟೋ ಮತ್ತು ಸ್ಕೂಲ್ ಕಟ್ಟಣಗಳನ್ನ ಕಟ್ಟುತಕ್ಕ ಬಗ್ಗೆ	ಪೂರ್ವಕ್ಕೆ—ಸರ್ಕಾರ ಜಾಗಾ ಮತ್ತು ಅಕ್ಕಪ್ಪಶೆಟ್ಟಿ ಕಟ್ಟೆ—ಪಶ್ಚಿಮಕ್ಕೆ—ಸರ್ಕಾರ ಖಾಲೀ ಜಾಗಾ—ಉತ್ತರಕ್ಕೆ ಪಬ್ಲಿಕ ರಸ್ತೆ—ದಕ್ಷಿಣಕ್ಕೆ—ದೊಡ್ಡಮುನಿಯಪ್ಪನ ಅಂಗಡಿ ವ ಖಾಲೀ ನಿವೇಕನ
5	ಹಳೇ ತಾಲ್ಲೂಕು ಕಚೇರಿಗೆ ಸೇರಿದ ಹಿತ್ತಲು	ಪುಟ್ಟಣ್ಣ	21—2 10—0	2 5	ಖಾಲೀ ನಿವೇಕನ	ಸರ್ಕಾರ ಕೆಲಸಕ್ಕಾಗಿ	ಪೂರ್ವಕ್ಕೆ—ದೊಡ್ಡಮುನಿಯಪ್ಪನ ಖಾಲಿ ನಿವೇಕನ—ಪಶ್ಚಿಮಕ್ಕೆ—ಪಬ್ಲಿಕ್ ಜಾಗಾ—ಉತ್ತರಕ್ಕೆ—ಹಳೇ ತಾಲ್ಲೂಕು ಕಚೇರಿ ದಕ್ಷಿಣಕ್ಕೆ— ದೊಡ್ಡಮುನಿಯಪ್ಪನ ಜಾಗಾ

ನಂ. 200.– ಸ್ ೧೮೭೮ನೇ ಇಸವಿಯ Iನೇ ಆಕ್ಟಿನ 14 ವ 22ನೇ ಸೆಕ್ಷನ್‌ಗಳನುಸರಿಸಿ, ಇದರಡಿ ನಮೂದಾಗುವ ಆಫೀಸರಿಗಳು ಡಿಟೋ ಸೆಕ್ಷನ್‌ಗಳಲ್ಲಿ ನಮೂದಿರುವ ಅಧಿಕಾರಗಳನ್ನು ಚಲಾಯಿಸತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಅಪ್ಪಣೆ ಕೊಡಿಸಿರುತ್ತಾರೆ.

ಎಕ್ಸೈಜ್ ಇಲಾಖೆಯಲ್ಲಿ.

ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ವ ಅದಕ್ಕೆ ಮೇಲ್ಪಟ್ಟ ಹುದ್ದೆಯುಳ್ಳ ವ ಮಾಹೆಯಾನಾ 10 ರೂಪಾಯಿಗೆ ಕಮ್ಮಿ ಯಿಲ್ಲದ ತಲಬುಳ್ಳ ತಮಾಂ ಆಫಿಸರುಗಳು.

ಪೊಲೀಸ್ ಇಲಾಖೆಯಲ್ಲಿ.

ಹೆಡ್ ಕಾನ್‌ಸ್ಟೇಬಿಲ್ ಯಾ ಜಮಾದಾರ್ ದರ್ಜೆಯ ವ ಅದಕ್ಕೆ ಮೇಲ್ಪಟ್ಟ ತಮಾಂ ಆಫಿಸರುಗಳು.

ರೆವಿನ್ಯೂ ಇಲಾಖೆಯಲ್ಲಿ.

ಕೇಕದಾರ ವ ಅದಕ್ಕೆ ಮೇಲ್ಪಟ್ಟ ಹುದ್ದೆಯ ತಮಾಂ ಆಫಿಸರುಗಳು.

ಮ್ಯುನಿಸಿಪಲ್, ಸಾಯರ್ ವ ಆಕ್ಟ್ರಾಯಿ ಇಲಾಖೆಗಳಲ್ಲಿ.

ದರೋಗಾ, ಮುತ್ಸದ್ದಿ ಯಾ ಮಣೇಗಾರ್ ಈ ಹುದ್ದೆಗಳ ವ ಅದಕ್ಕೆ ಮೇಲ್ಪಟ್ಟು ಮಾಹೆಯಾನಾ 10 ರೂಪಾಯಿಗೆ ಕಮ್ಮಿಯಿಲ್ಲದ ತಲಬುಳ್ಳ ತಮಾಂ ಆಫಿಸರುಗಳು.

ತಾರೀಖು 21ನೇ ಸೆಪ್ಟಂಬರ್ 1889.

ನಂ. 201.—1885ನೇ ಇಸವಿಯ VIನೇ ಆಕ್ಟಿನಿಂದ ತಿದ್ದುಪಾಟು ಮಾಡೋಣಾದ 1881ನೇ ಇಸವಿಯ XXIIನೇ ಯ ಎಕ್ಸೈಜ್ ಆಕ್ಟಿನ 34 A ಸೆಕ್ಷನಿನ ದೆಸೆಯಿಂದ ಪುಂಟಾದ ಅಧಿಕಾರವನ್ನ ಚಲಾಯಿಸುವದರಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದವರು ಪೊಲೀಸ್ ಆಫಿಸರುಗಳಿಗೆ ಇದರಡಿ ನಮೂದಿಸಿರುವ ಅಧಿಕಾರಗಳನ್ನು ಇದರ ದೆಸೆಯಿಂದ ಕೊಟ್ಟಿರುತ್ತಾರೆ.

(a) (ತಮಾಂ ಪೊಲೀಸ್ ಆಫಿಸರುಗಳಿಗೆ)—ಸದರೀ ಆಕ್ಟಿನ 27ನೇ ಸೆಕ್ಷನಿನಿಂದ ಎಕ್ಸೈಜ್ ಆಫಿಸರುಗಳಿಗೆ ಕೊಡಲ್ಪಟ್ಟಿರುವ ಅಧಿಕಾರಗಳು.

(b) (ಸ್ಪೆಷಲ್ ಚಾರ್ಜಿನಲ್ಲಿರುವ ಪೊಬ್ಬ ಪೊಲೀಸ್ ಆಫಿಸರರಿಗೆ, ಅಥವಾ ಹೆಡ್ ಕಾನ್‌ಸ್ಟೇಬಿಲ್ ಯಾ ಜಮಾದಾರ್, ಯಾ ಸಾರ್ಜಂಟ್ ಯಾ ದಫೇದಾರ್ ಈ ಹುದ್ದೆವುಳ್ಳ ಯಾ ಅದಕ್ಕೆ ಮೇಲ್ಪಟ್ಟ ಹುದ್ದೆಯುಳ್ಳ ಪೊಬ್ಬ ಪೊಲೀಸ್ ಆಫಿಸರಿಗೆ)—ಸದರೀ ಆಕ್ಟಿನ 28 ವ 29ನೇ ಸೆಕ್ಷನ್‌ಗಳಿಂದ ಎಕ್ಸೈಜ್ ಆಫಿಸರ್‌ಗಳಿಗೆ ಕೊಡಲ್ಪಟ್ಟಿರುವ ಅಧಿಕಾರಗಳು.

ತಾರೀಖು 21ನೇ ಸೆಪ್ಟಂಬರ್ 1889.

ನಂ. 198.—ಹಾಲಿ ಜಾರೀಲಿರುವ 1878ನೇ ಇಸವಿಯ ಫಾರೆಸ್ಟ್ಸ್ ರೂಲ್ಸ್ ನಿಬಂಧನೆಗಳ 26ನೇ ಕಲಮ್ಮುನುಸರಿಸಿ ವಿಶೇಷ ಸಲ್ಪಟ್ಟು ಇದರಡಿ ಬರುವ ಉಪನಿಬಂಧನೆಗಳನ್ನ ಮಂಜೂರ್ಮಾಡಿ ಸರ್ವರಿಗೂ ತಿಳಿಯತಕ್ಕ ಬಗ್ಗೆ ಪ್ರಕಟಪಡಿಸೋಣಾಗಿರುತ್ತದೆ.

1. ಯಾವದಾದರೊಂದು ಡಿಸ್ಟ್ರಿಕ್ಟ್ ಜಂಗ್ಲಿಯಲ್ಲಿ ಯಾ ಜಂಗಲಿನಿಂದ, ನಾಟೂ ವ ಚೌಬೀನೆಯನ್ನ ಕಡಿದು ಸಾಗಿಸತಕ್ಕ ಬಗ್ಯಾಗಲಿ, ಅಥವಾ ಇತರ ಜಂಗ್ಲೀ ವೈತ್ಪತ್ತಿಯನ್ನ ಜಮಾಯಿಃ ಸಾಗಿಸತಕ್ಕ ಬಗ್ಯಾಗಲಿ, ಡಿಪ್ಯೂಟಿ ಕಮ್ಮಿಷನರಾಗಲಿ, ಯಾ ಅವರ್ಯಾಗಿ ಅವರಿಂದ ಅಧಿಕಾರ ಹೊಂದಿದ ಯಿತರ ಆಫಿಸರಾಗಲಿ ಲೈಸೆನ್ಸುಗಳನ್ನ ಕೊಡಬಹುದು ಲೈಸೆನ್ಸುದಾರರು ಅಂಥಾ ಲೈಸೆನ್ಸುಗಳಲ್ಲಿ ನಮೂದಾಗುವ ಷರತ್ತುಗಳನ್ನನುಸರಿಸಿ ನಡದುಕೊಳ್ಳಲಿಕ್ಕೆ ಬದ್ಧರಾಗಿರತಕ್ಕದ್ದು.

2. ಮೇದರುಗಳು ಡಿಸ್ಟ್ರಿಕ್ಟ್ ಜಂಗಲಿಗಳಲ್ಲಿ ಬಿದರನ್ನ ಪ್ರತಿ ದಫೆಯಲ್ಲೂ 20 ತಲೆಹೊರೆಗಳಸರಿವಿಗೂ ಕಡದು ಸಾಗಿಸತಕ್ಕ ಬಗ್ಯಾಗಿ ತಾಲ್ಲೂಕು ಅಮಲ್ದಾರರು ಲೈಸೆನ್ಸು ಕೊಡಲಿಕ್ಕೆ ಅಧಿಕಾರ ವುಳ್ಳವರಾಗಿರುತ್ತಾರೆ. ಡಿಸ್ಟ್ರಿಕ್ಟ್ ಜಂಗ್ಲಿಗಳಲ್ಲಿ, ವರ್ತಕರಿಗೆ ವ ಯಿತರರಿಗೆ ಕೀಕಾಗುವಂಥಾ ಉಳಿಕೆಕೊಳ್ಳಲ್ಪಡದೇ ಯಿರುವಬಗೆ ನಾಟೂ ವ ಚೌಬೀನೆಯನ್ನ ಕಡಿದು ಸಾಗಿಸತಕ್ಕ ಬಗ್ಯೆ ನಾಟೂಗಳ ವಿಷಯದಲ್ಲಿ 10 ಭಂಡೀ ಕೋಜೆಗಳವರಿವಿಗೂನ್ನೂ, ಚೌಬೀನೇ ವಿಷಯವಲ್ಲಿ 20 ಭಂಡೀ ಕೋಜೆಗಳವರಿವಿಗೂನ್ನೂ ಅಮಲ್ದಾರರು ಲೈಸೆನ್ಸು ಕೊಡಬಹುದು. ಇದಕ್ಕೆ ಜಾಸ್ತೀ ತೇದಾದಿಗಾಗಿ ಡಿಸ್ಟ್ರಿಕ್ಟು ಡಿಪ್ಯೂಟಿಕಮ್ಮಿಷನರುಗಳು ಲೈಸೆನ್ಸುಗಳನ್ನ ಕೊಡಬಹುದು.

3. ಯಾವ ಡಿಸ್ಟ್ರಿಕ್ಟು ಯಾ ತಾಲ್ಲೂಕಿನಲ್ಲಿ ನಾಟೂ ವ ಚೌಬೀನೆಗಳ ಪ್ರರೋಚ್ಛೆಬಗ್ಯೆ ಡಿಪೋಯಾನೇ ಕೋಲೀ ಇರುತ್ತದೆಯೋ, ಅಂಥಾ ಡಿಸ್ಟ್ರಿಕ್ಟು ಯಾ ತಾಲ್ಲೂಕಿನಲ್ಲಿ ಯಿರುವ ಯಾವ ಗವರ್ನಮೆಂಟ್ ಜಂಗಲ್ ಯಾ ಜಮೀನಿನಲ್ಲಿ ಮರ ವ ಚೌಬೀನೆಯನ್ನ ಕಡಿದು ಸಾಗಿಸುವದಕ್ಕೆ ತೀರ್ವೆ ಪಾವತಿಯ ಲೈಸೆನ್ಸನ್ನ ಕೊಡಲಾಕ್ಯಕವಿಲ್ಲವೆಂದು ಫಾರೆಸ್ಟ್ಸ್ ಇನ್‌ಸ್ಪೆಕ್ಟರ್ ಜನರಲ್‌ಯವರು ಜರೂರು ವುಂಟಾದಾಗ ಹುಕುಂ ಮಾಡಬಹುದು.

4. ಯಾವ ಡಿಸ್ಟ್ರಿಕ್ಟು ಯಾ ತಾಲ್ಲೂಕಿನಲ್ಲಿ ನಾಟೂ ಚೌಬೀನೆ ಯಾ ಇತರ ಜಂಗ್ಲಿ ಉತ್ಪತ್ತಿಗಳನ್ನ ಕಡಿದು ಸಾಗಿಸಲ್ಪಡಬೇಕಾಗುತ್ತೋ ಆ ಡಿಸ್ಟ್ರಿಕ್ಟು ಯಾ ತಾಲ್ಲೂಕು ಖಜಾನೆಯಲ್ಲಿ, ಅಂತಾ ನಾಟೂ ಯಾ ಚೌಬೀನೆ ಕಡಿದು ಸಾಗಿಸತಕ್ಕ ಬಗ್ಯಾಗಲಿ, ಇತರ

ಜಂಗ್ಲೀ ಫಸಲನ್ನ ಜಮಾಯಿಸಿ ಸಾಗಿಸತಕ್ಕ ಬಗ್ಯಾಗಲಿ. ಮೈಸೂರು ಗೆಜೆಟ್ಟಿನಲ್ಲಿ ಆಗಿಂದಾಗ್ಯೆ ಅದಕ್ಕಾಗಿ ವಿಧಿಸೋಣಾಗುವ ತೀರ್ವೆ ಮೊಬಲಗನ್ನ ಪಾವತೀಮಾಡಿ ಅಂತಾ ಲೈಸೆನ್ಸ ಕೊಡಲಿಕ್ಕೆ ಅಧಿಕಾರ ಹೊಂದಿದ ಆಫಿಸರಬಳಿ ಸದರೀ ಖಾನೆ ರೇವಿಯನ್ನ ಹಾಜರ್ ಮಾಡಿದ ಹೊರ್ತು ಯಾವ ಮನುಷ್ಯನಿಗೂ ಲೈಸೆನ್ಸ ಕೊಡಲ್ಪಡತಕ್ಕ್ದ್ದಲ್ಲವು.

ಪರಂತು ಮೇಲ್ಕಂಡ 3 ವ 4ನೇ ಕಲಮುಗಳಲ್ಲಿ ವಿಧಿಸೋಣಾದ ನಿಬಂಧನೆಗಳ ಪೈಸೆಯಿಂದ ಫಾರೆಸ್ಟು ರೂಲ್ಸಿನ 24ನೇ ಸೆಕ್ಷರ್ಮೇರಿಗೆ ರೈತರುಗಳಿಗುಂಟಾಗಿರುವ ಹಕ್ಕುಗಳಿಗೆ ರೂಲ್ಸಿನ 25ನೇ ಸೆಕ್ಷರ್ ಅನುಸರಿಸಿ ರದ್ದಾದ ಹೊರ್ತು ಬಾಧಕವುಂಟಾಗತಕ್ಕ್ದ್ದಲ್ಲವು.

5. ಉಸ್ತವಾರಿ ಬಗ್ಯಾಗಿ ಸ್ಪೆಷಿಯಲ್ ಶಿಬ್ಬಂದಿ ಯಿಲ್ಲದೇ ಯಿರುವಂತಾ ಯಾವ ಡಿಸ್ಟ್ರಿಕ್ಟು ಫಾರೆಸ್ಟುಗಳ ವಿಷಯದಲ್ಲಾಗಲಿ ಅಂತಾ ಜಂಗ್ಲಿಯು ಯಾವ ಗ್ರಾಮದ ಸರಹದ್ದಿನೊಳಗೆ ಯಿದ್ದು ಲೈಸೆನ್ಸದಾರನು ಲೈಸೆನಿನ ಅಧಿಕಾರದ ಮೇಲೆ ನಾಟಾ, ಚಾಖೀನೆ ಯಾ ಇತರ ಜಂಗ್ಲೀ ಫಸಲುಗಳನ್ನ ಸಾಗಿಸುತ್ತಾನೋ ಆ ಗ್ರಾಮಸ ಪಟೇಲನಬಳಿ, ತನಖೀಬಗ್ಯೆ ಅವುಗಳನ್ನ ಹಾಜರ್ ಮಾಡಲಿಕ್ಕೂ, ಮತ್ತು ಅಂತಾ ಲೈಸೆನ್ಸಿನಲ್ಲಿ ನಮೂದಾಗಿರುವ ತೇದಾದು ಸರಿಯಾಗಿ ಯಿದೆಯಂದು ಪಟೇಲನ ಷರಾ ಪಡೆಯಲಿಕ್ಕೂ, ಲೈಸೆನ್ಸದಾರನು ಬದ್ಧನಾಗಿರತಕ್ಕ್ದ್ದು. ಪುಸ್ತವಾರಿ ಬಗ್ಯಾಗಿ ಸ್ಪೆಷಿಯಲ್ ಶಿಬ್ಬಂದಿ ಯಿರುವಂತಾ ಯಾವ ಡಿಸ್ಟ್ರಿಕ್ಟು ಫಾರೆಸ್ಟು ವಿಷಯದಲ್ಲಾಗಲಿ, ಲೈಸೆನ್ಸದಾರನು ಜಂಗಲಿನಲ್ಲಿ ಪ್ರವೇಶ ಮಾಡಲಿಕ್ಕೆ ಮುಂಚಿತವಾಗಿಯೇ ಅಂತಾ ಫಾರೆಸ್ಟು ಚಾರ್ಜಿನಲ್ಲಿರುವ ಪುದ್ಯೋಗಸ್ತನಿಗೆ ಲೈಸೆನ್ಸನ್ನ ತೋರಿಸತಕ್ಕ್ದ್ದಲ್ಲದೆ ಆ ಫಾರೆಸ್ಟಿನೊಳಗಣ ನಾಟಾ ಯಾ ಚಾಖೀನೆ ಯಾ ಜಂಗ್ಲೀ ಪುತ್ಪತ್ತಿಗಳನ್ನ ಕಡಿದ ತರುವಾಯ ಸಾಗಿಸುವದಕ್ಕೆ ಮುಂಚಿತವಾಗಿ ಅವುಗಳನ್ನ ತನಖೀಮಾಡಿಸಬೇಕಾದ್ದಲ್ಲದೆ ಮೇಲೆ ಹೇಳೋಣಾದ ಮೇರಿಗೆ ಲೈಸೆನಿನಲ್ಲಿ ಷರಾ ಪಡೆಯತಕ್ಕ್ದ್ದು.

6. ನಾಟಾ ಯಾ ಬಿದರು ಅಥವಾ ಮತ್ಯಾವ ಇತರ ಫಾರೆಸ್ಟು ಉತ್ಪತ್ತಿಯಾಗಲಿ ಅವು ತಲಪಬೇಕಾದ ಸ್ಥಳ ಕೀರಿದ ತರುವಾಯ ಅಥವಾ ಅಂಥಾ ನಾಟಾ ಯಾ ಬಿದರು ಅಥವಾ ಇತರ ಫಾರೆಸ್ಟು ಉತ್ಪತ್ತಿಯನ್ನ ಸಾಗಿಸುವ ಬಗ್ಯಾಗಿ ಲೈಸೆನಿನಲ್ಲಿ ನಮೂದಾದ ವಾಯಿದೆ ಆಖೈರ್ ಪಳಗಾಗಿ (ಈ ಯರಡರ ಪೈಕಿ ಯಾವದು ಮೊದಲು ಸಂಭವಿಸಿದಾಗ್ಯೂ ಸರಿಯೇ), ಲೈಸೆನ್ಸದಾರನು ಸದರೀ ಲೈಸೆನ್ಸನ್ನು ಅದು ಕೊಟ್ಟಂಥಾ ಆಫಿಸರಿಗಾಗಲಿ ಅಥವಾ ಅಂಥಾ ನಾಟಾ, ಯಾ ಬಿದರು ಅಥವಾ ಇತರ ಫಾರೆಸ್ಟು ಹುಟ್ಟುವಳಿಯು ಸಾಗಿಸಲ್ಪಟ್ಟಂಥಾ ಯಾ ಸಾಗಿಸಲ್ಪಡಲಿಕ್ಕೆ ಉದ್ದೇಶಿಸಲ್ಪಟ್ಟಂಥಾ ತಾಲ್ಲೂಕಿನ ಅಮಲ್ದಾರರಿಗಾಗಲಿ ಯಾ ಅದನ್ನ ತೆಗಮುಕೊಳ್ಳುವದಕ್ಕೆ ಮೊಕರರ್ ಮಾಡಲ್ಪಟ್ಟ ಮತ್ಯಾವ ನೌಕರರಿಗಾಗಲಿ ಒಪ್ಪಿಸತಕ್ಕ್ದ್ದು. ಮತ್ತು ಅಂಥಾ ನಾಟಾ, ಬಿದರು ಯಾ ಇತರ ಫಾರೆಸ್ಟು ಹುಟ್ಟುವಳಿಯು ಕುಂಪಣಿ ಕೀನೆಗೆ ಸಾಗಿಸಲ್ಪಟ್ಟಾಗ ಸದರೀ ಲೈಸೆನ್ಸ ಅವರಲ್ಲಿ ನಮೂದ್ ಮಾಡಲ್ಪಟ್ಟಂತೆ ಸರಹದ್ದಿನಲ್ಲಿನ ಪಟೇಲನಿಗಾಗಲಿ ಸಾಯರ್ ಕಟ್ಟೆ ಉದ್ಯೋಗಸ್ಥನಿಗಾಗಲಿ ಅಥವಾ ಇತರ ಠಾಣೆ ಉದ್ಯೋಗಸ್ಥನಿಗಾಗಲಿ ಒಪ್ಪಿಸಲ್ಪಡತಕ್ಕ್ದ್ದು: ಸದರೀ ಉದ್ಯೋಗಸ್ಥನು ತರುವಾಯ ಸದರೀ ಲೈಸೆನ್ಸ ಪ್ರಕಾರ ತೇದಾದು ಸರಿಯಾಗಿ ಯಿರುತ್ತೆಂದು ಷರಾ ಬರೆದು ಅದನ್ನು ಕೊಟ್ಟ ಆಫಿಸರಿಗೆ ಕಳುಹಿಸತಕ್ಕ್ದ್ದು ಯಾ ತನ್ನ ತಾಲ್ಲೂಕು ಅಮಲ್ದಾರರ ದ್ವಾರಾ ರವಾನಿಸತಕ್ಕ್ದ್ದು. ಲೈಸೆನಿನಲ್ಲಿ ನಮೂದ್ ಮಾಡಲ್ಪಟ್ಟದ್ದಕ್ಕಿಂತಲೂ ಜಾಸ್ತೀ ತೇದಾದು ಸಾಗಿಸಲ್ಪಟ್ಟಾಗ ಲೈಸೆನ್ಸನ್ನ ಒಪ್ಪಿಸಿಕೊಳ್ಳುವಂಥಾ ಆಫಿಸರನು, ತಾನು ವಜ್ಜ ಮಾಜಿಸ್ಟ್ರೇಟನಲ್ಲದ ಪಕ್ಷಕ್ಕೆ ಸದರೀ ಲೈಸೆನ್ಸದಾರನನ್ನು ವಜ್ಜ ಮಾಜಿಸ್ಟ್ರೇಟರ ಮುಂದೆ ವಿಚಾರಣೆ ಬಗ್ಯೆ ಕೂಡ್ಲೆ ಹಾಜರ್ಮಾಡತಕ್ಕ್ದ್ದಲ್ಲದೆ ಆ ಸಂಗತಿಯನ್ನು ಲೈಸೆನ್ಸ ಕೊಟ್ಟಂಥಾ ಆಫಿಸರಿಗೆ ತಿಳಿಸತಕ್ಕ್ದ್ದು.

7. ಮೇಲ್ಕಂಡ ವಾಯಿದೆ ಮುಗಿಯುವದರ ಪಳಗಾಗಿ, ಸದರೀ ನಾಟಾ, ಬೊಂಬು ಅಥವಾ ಮತ್ಯಾವ ಫಾರೆಸ್ಟು ಹುಟ್ಟುವಳಿಯಾದರೂ ಲೈಸೆನ್ಸ ಪ್ರಕಾರ ಕತ್ತರಿಸಲ್ಪಡದೇ ಜಮಾಯಿಸಲ್ಪಡದೇ ಯಾ ಸಾಗಿಸಲ್ಪಡದೆ ಯಿದ್ದರೆ ಸದರೀ ಲೈಸೆನ್ಸ ರದ್ದು ಮಾಡಲ್ಪಟ್ಟಂತೆ ಭಾವಿಸಲ್ಪಡತಕ್ಕ್ದ್ದು: ಮತ್ತು ಅವು ತಕ್ತರಿಸಿ ಯಾ ಜಮಾಯಿಸಲ್ಪಟ್ಟು ಪರಂತು ಆ ಬಗ್ಯಾಗಿ ಕೊಡಲ್ಪಟ್ಟ ವಾಯಿದೆ ಪಳಗಾಗಿ ಆದು ತಲಪಬೇಕಾದ ಸ್ಥಳಕ್ಕೆ ಸಾಗಿಸಲ್ಪಡದೇ ಯಿದ್ದರೆ, ಲೈಸೆನ್ಸದಾರನು ಲೈಸೆನ್ಸನ್ನ ವಾಪಸ್ ಮಾಡಿ ಲೈಸೆನ್ಸ ಫೀ ಪೈಕಿ ನಾಲ್ಕರಲ್ಲಿ ಒಂದುಭಾಗಕ್ಕೆ ಸಮನಾದ ಮೊಬಲಗನ್ನು ಜುರ್ಮಾನೇ ತರೀಕ ಪಾವತಿ ಮಾಡಿದ ತರುವಾಯ ಫಾರೆಸ್ಟು ರೂಲಿನ 34ನೇ ಸೆಕ್ಷರ್ ಅನುಸರಿಸಿ ಬಂದು ಪರ್ಮಿಟ್ಟಯಾನೇ ರಹದಾರಿ ಪಡೆಯುವ ಬಗ್ಯೆ ಅರ್ಹನಾಗಿರತಕ್ಕ್ದ್ದು, ಪರಂತು ಲೈಸೆನ್ಸದಾರನು, ಸಾಗಿಸದೇ ನಿಂತ ಬಗ್ಯೆ ಅವಿಚ್ಛಿನ್ನ ನಾಡೆ ಭಾರಿ ಮೆಳೆ, ನದಿಗಳು ಕಟ್ಟಿಕೊಳುವಣ ಯಾ ಭಂಡಿಗಳು ಸಿಕ್ಕದೆ ಯಿರುವಣ ಅಥವಾ ದಾರಿಯಲ್ಲಿ ಮತ್ಯಾವದಾದರೂ ಅಕಸ್ಮಾತ್ತು ಯಿವೆ ಮೊದಲಾದ ಅಸಾಧ್ಯವಾದ ಅಡಚಣೆ ಸಂಭವಿಸಿತೆಂದು ಖಾಸ್ ಕೊಡತಕ್ಕ್ದಂಥಾ ಆಫಿಸರಿಗೆ ತೃಪ್ತಿಕರವಾಗಿ ರುಜುವಾತ್ ಮಾಡಿಕೊಟ್ಟ ಪಕ್ಷದಲ್ಲಿ ಅವನು ಅದನ್ನ ಸಾಗಿಸುವ ಬಗ್ಯಾಗಿ ವಜ್ಜಾಫೀ ರಹದಾರಿಯನ್ನ ಪಡೆಯುವ ಬಗ್ಯೆ ಅರ್ಹನಾಗಿರತಕ್ಕ್ದ್ದು. ಫಾರೆಸ್ಟು ಹುಟ್ಟುವಳಿಯಿಂದ ಭರ್ತಿಮಾಡಲ್ಪಟ್ಟ ತಮಾಂ ಭಂಡಿಗಳೂ, ಫಾರೆಸ್ಟು ರೂಲಿನ 34ನೇ ಸೆಕ್ಷರ್ ನಿಯಮಗಳನುಸರಿಸಿ ಯಾವದಾದರೂ ಪೋಲೀಸ್, ರವಿನ್ಯೂ ಯಾ ಫಾರೆಸ್ಟು ಆಫಿಸರಿಂದಾದರೂ ಜಪ್ತಿ ಜಮಾಯಿಷೀ ಮಾಡಲ್ಪಡಲಿಕ್ಕೆ ಬಳಪಟ್ಟಿರತಕ್ಕ್ದ್ದು.

8. ಬೂದು ಲೈಸೆನ್ಸಿಗೆ ಸಂಬಂಧಪಟ್ಟ ತಮಾಂ ನಾಟಾ, ಬಿದರು ಯಾ ಇತರ ಫಾರೆಸ್ಟು ಹುಟ್ಟುವಳಿಯು ಒಂದೇ ಲಾಟಾಗಿ ಯೀಕ ಕಾಲದಲ್ಲಿಯೇ ಸಾಗಿಸಲ್ಪಡಬೇಕಾಗಿಲ್ಲದೆ ಅವರ ಜೊತೆಯಲ್ಲಿ ಲೈಸೆನ್ಸ ಸುದಾ ಯಿರತಕ್ಕ್ದ್ದು; ಪರಂತು ಸರಕಾರವಿಂದ ಗುತ್ತಿಗ್ಯೆ ಪಡಕೊಂಡಂಥಾ ಗುತ್ತಿಗೆದಾರರಿಂದ ಅಂಥಾ ಗುತ್ತಿಗೆ ವಾಯಿದೆ ಪಳಗೆ ಗುತ್ತಿಗೆ ಷರತ್ತುಗಳನುಸರಿಸಿ ಅವರಿಂದಲಾಗಲಿ ಅವರ ನೌಕರರಿಂದಲಾಗಲಿ ಸಾಗಿಸಲ್ಪಡುವಂಥಾ ಗೋಂದು ಧೂಪ ಅರಗು, ಜೇನುಮೇಣ, ಹೊಣಕೇ ಹಂಣು ಯಿವೇ ಮೊದಲಾವ ಫಾರೆಸ್ಟು ಚಿಲ್ಲರೇ ಹುಟ್ಟುವಳೀ ಜಮಾವಣೀ ಬಗ್ಯೆ ಈ ರೂಲ್ಸ ಅನ್ವಯಿಸತಕ್ಕ್ದ್ದಲ್ಲವು, ಪರಂತು ಅಂಥಾ ಗುತ್ತಿಗೆದಾರರು ಅಂಥಾ ಫಾರೆಸ್ಟು ಚಿಲ್ಲರೇ ಹುಟ್ಟುವಳೀ ವಿಷಯದಲ್ಲಿ ಅವರ ಕಂಟ್ರಾಕ್ಟಿನ ಷರತ್ತುಗಳಿಗೆ ಬದ್ಧರಾಗಿ ನಡೆದು ಕೊಳ್ಳತಕ್ಕ್ದ್ದು. ತಪ್ಪಿದಲ್ಲಿ ಅದಕ್ಕಾಗಿ ವಿಶೇಷತಃ ವಿಧಿಸೋಣಾದಂಥಾ ಅಥವಾ ಫಾರೆಸ್ಟು ರೂಲ್ಸಿನ 40ನೇ ಸೆಕ್ಷನಿನಲ್ಲಿ ವಿವರಿಸಲ್ಪಟ್ಟಂಥಾ ದಂಡಗಳಿಗೆ ಗುರಿಯಾಗಿರತಕ್ಕ್ದ್ದು.

ತಾರೀಖು 7ನೇ ಅಕ್ಟೋಬರ್ 1889.

ನಂ. 208.—ಮುಳಬಾಗಲ್ ತಾಲ್ಲೂಕು ಪೈಕಿ ಕೆಲವು ಗ್ರಾಮಗಳನ್ನ ಆಜುಬಾಜು ಗ್ರಾಮಗಳಿಗೆ ಕೀರಿಸೋಣಾಗುವಂತಾ ತಪಶೀಲ್‌ಕಂಡ ಇದರದಿ ಬರುವ ತಕ್ತೈಯನ್ನ ಪ್ರಕಟಪಡಿಸೋಣಾಗಿರುತ್ತ

B

ಮಾಗಣಿ ಹೆಸರು.	ನಂಬರ್.	ಕಾಯಂ ಯಿಡಲ್ಪಟ್ಟ ಗ್ರಾಮಗಳ ಹೆಸರು.	ನಂಬರ್.	3ನೇ ಹಿಡಿನಲ್ಲಿ ನಮೂದಾದ ಗ್ರಾಮಗಳಿಗೆ ಕೇರಿಸಿಬಿಡೋಣಾದ ಗ್ರಾಮಗಳ ಹೆಸರು.
1	2	3	4	5
ಬೈರಕೂರು ..	1	ದೊಡ್ಡ ಅತ್ತಿಹಳ್ಳಿ ..	1	ಕುಂಬಳಕುಂಟೆ
			2	ಚಿಕ್ಕ ಹತ್ತಿಹಳ್ಳಿ
			3	ಉಪ್ಪಾರದೊಡ್ಡಿ
	2	ಬಾಂದಮೊನಹಳ್ಳಿ ..	1	ಕಲಿಯುಗಲಕ್ಷ್ಮೀಪುರ
	3	ಕಾಗಲಮೆಟ್ಟಿ ..	1	ವಳಗೆರಹಳ್ಳಿ
	4	ಬೈರಕೂರು ..	1	ಪಾಲೂರಹಳ್ಳಿ
ಮುಳಬಾಗಲು ..	5	ಯಿರಗಮುತ್ತೇನಹಳ್ಳಿ ..	1	ಕೊನಮಗುಂಟೆ
ಮಲ್ಲನಾಯಕನಹಳ್ಳಿ.	6	ತಿಪ್ಪಮೊಡ್ಡಿ ..	1	ಮುಕ್ಕಡಿಬೈಯ್ಯಪಲ್ಲಿ
ಯಲದೂರು ..	7	ಅರಕೆರಿ ..	1	ಲಾಲಾಪುರ
	8	ಕೃಷ್ಣಾಪುರ ..	1	ಬಿಟ್ಟಹಳ್ಳಿ
	9	ದೊಡ್ಡಗುರ್ಕಿ ..	1	ವೆಂಕಟೇಶಪುರ
			2	ಕೆಂಪಾಪುರ
			3	ಮತ್ತಲಸಂದ್ರ
	10	ರಾಚಬಂಡಿ(ದುಗ್ಗಸಂದ್ರಹೊಳೆ) ..	1	ಜಗನ್ನಾಥಪುರ(ಯಲದೂರುಹೋಬಳಿ)
	11	ಯಲದೂರು ..	1	ಕದರಿನಾಯ್ಕನಹಳ್ಳಿ
	12	ಆಚ್ಚಂಪಲ್ಲಿ ..	1	ಮಲನಾಗನಹಳ್ಳಿ
			2	ಚನ್ನಂಪಲ್ಲಿ
	13	ಹರಳಕುಂಟಿ ..	1	ಗುರಪ್ಪರಡ್ಡಿಹಳ್ಳಿ
	14	ವಿಂಡಿಗನಗರ ..	1	ಕುರಪಲ್ಲಿಗಡಿ
	15	ಯದರೂರು ..	1	ಕುರಬರಹಳ್ಳಿ
			2	ಅಮ್ಮನಿಕೆರೆ
			3	ಗೋಪಕೆಲಹಳ್ಳಿ
	16	ಕತ್ತಿಬೀಸನಹಳ್ಳಿ ..	1	ಕಿಟ್ಟಹಳ್ಳಿ
ಆವನಿ ..	17	ಕೇತಮಂಗಲ ..	1	ಮಂಚಿನಾಯ್ಕನಹಳ್ಳಿ
			2	ಮಜರೆಹೊಸಹಳ್ಳಿ
	18	ಕುರಬರಹೊಸಹಳ್ಳಿ ..	1	ನಾಗಿನಾಯ್ಕನಹಳ್ಳಿ
	19	ಅನಂತಾಪುರ ..	1	ಬಂಡಹಳ್ಳಿ
	20	ಮಜರೆಅತ್ತಿಕುಂಟೆ ..	1	ರಾಮದಾಸಕುಂಟೆ
	21	ಬೊಮ್ಮಸಂದ್ರ ..	1	ಮಲಸಂದ್ರ
	22	ಕೇಷಾಪುರ ..	1	ಕುಪ್ಪಾಪುರ
ದುರ್ಗಸಂದ್ರ ..	23	ಮಟಿಕನಸಂದ್ರ .	1	ಕಂಸಲವಾರಹಳ್ಳಿ
	24	ಮಂಡಿಕಲ್ಲು ..	1	ಕುರಬರಹಳ್ಳಿ
	25	ಅಗರ ..	1	ಮಟ್ಟಪಲ್ಲಿ

ನಂ. 209.—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಯನ್ನು ಮಂಜೂರ್ಮಾಡೋಣಾಗಿರುತ್ತದೆ.

ನಂಬರ್.	ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ ವರ್ಗಾ.	ಷರಾ.
1	2	3	4	5
1	ಚಂಗಾರಪಲ್ಲಿ ..	ಮುಳಬಾಗಲ್	ಚಿಂತಾಮಣಿ	*ಹಾಲಿ ಕೇರಿಸಿಬಿಡೋಣಾದ ಕಂಸಲವಾರಪಲ್ಲಿ ಯೊಂದಿಗೆ.
*2	ಮಟಿಕಸಂದ್ರ ..			
3	ರಾಚಕೊಂಡ್ಲಹಳ್ಳಿ ..			

ನಂ. 207.—ಮೈಸೂರು ತಾಲ್ಲೂಕು ಪೈಕಿ ಕೆಲವು ಗ್ರಾಮಗಳನ್ನ ಅಜೂಬಾಜೂ ಗ್ರಾಮಗಳಿಗೆ ಕೇರಿಸೋಣಾಗುವಂತಾ ತಪಸೀಲ್ ಕೆಂಡ ಇದರಡಿ ಬರುವ ತಖ್ತೆಯನ್ನ ಪ್ರಕಟಪಡಿಸೋಣಾಗಿರುತ್ತದೆ.

ಮೂಗಣಿ.	ನಂ.	ಕಾಯಂ ಯಿಡಲ್ಪಟ್ಟ ಗ್ರಾಮದ ಹೆಸರು.	ನಂಬರ್.	3ನೇ ಹೆಡ್ಡಿನಲ್ಲಿ ನಮೂದಾದ ಗ್ರಾಮಗಳಿಗೆ ಕೇರಿಸಿಬಿಡೋಣಾದ ಗ್ರಾಮಗಳ ಹೆಸರು.	ಪರಾ.
1	2	3	4	5	6
ಮೈಸೂರು ..	1	ಕುರಬರಹಳ್ಳಿ ..	1	ಚಟ್ಟಿಹಳ್ಳಿ	
ಆನಂದೂರು ..	2	ಕೆಲ್ಲೂರನಾಗನಹಳ್ಳಿ ..	1	ಕೆಂಚನಹಳ್ಳಿ	
ಯಿಲವಾಲ ..	3	ಹಿರಿಯಾಲು ..	1	ಅಂಗೋಡಿಹಳ್ಳಿ	
	4	ಬೊಮ್ಮನಹಳ್ಳಿ ..	1	ಸೋರೆಕಾಯಿಪುರ	
ವರಕೋಡು ..	5	ಚಟ್ಟನಹಳ್ಳಿ ..	1	ನಾರನಹಳ್ಳಿ	
ಲಿಂಗಾಂಬುಧಿ ..	6	ಲಿಂಗಾಂಬುಧಿ ..	1	ಮೂಳಗಾಳ	
	7	ಕಳಲವಾಡಿ ..	1	ರಾಯನಕೆರೆ	
			2	ಬನ್ನೂರು	
	8	ಹೆಬ್ಬಾಳು ..	1	ಬಡಬೊಮ್ಮನಹಳ್ಳಿ	
	9	ಮುಳ್ಳೂರು ..	1	ಗುಲಮಾಚನಹಳ್ಳಿ	
ತಿಂಥಣಿ ..	10	ದೊಡ್ಡಕಾಣ್ಯ ..	1	ನೋಮೇನಹಳ್ಳಿ	

ತಾರೀಖು 7ನೇ ಅಕ್ಟೋಬರ್ 1889.

ನಂ. 210.—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಯನ್ನ ಮಂಜೂರ್ಮಾಡೋಣಾಗಿರುತ್ತದೆ.

1. ಚನ್ನಾಪುರ
2. ಶಾನಭೋಗನಹಳ್ಳಿ

} ಶ್ರೀರಂಗಪಟ್ಣ ತಾಲ್ಲೂಕಿನಿಂದ ನಾಗಮಂಗಲ ತಾಲ್ಲೂಕಿಗೆ ವರ್ಗಾ.

1. ಚಿಕ್ಕಸಮುದ್ರ
2. ಪಟ್ಟದಪುರ

} ನಾಗಮಂಗಲ ತಾಲ್ಲೂಕಿನಿಂದ ಅತ್ತಿಕುಪ್ಪೆ ತಾಲ್ಲೂಕಿಗೆ ವರ್ಗ.

ತಾರೀಖು 11ನೇ ಅಕ್ಟೋಬರ್ 1889.

ನಂ. 211.—ಬೆಂಗಳೂರು ಡಿಸ್ಟ್ರಿಕ್ಟು ಮಾಜಿ ಖಜಾನಚಿ ಮೆ॥ ಬಿ. ಗರುಣಾಚಾರ್ರು ಬೆಂಗಳೂರು ಡಿಸ್ಟ್ರಿಕ್ಟು ಲೋಕಲ್ ಫಂಡ್ ಬೋರ್ಡಿನ ಮೆಂಬರಾಗಿ ನೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಅಕ್ಟೋಬರ್ 1889.

ಕ್ಯಾಂಪ್ ನಂ. 536.—ಮೆ॥ ವಿ. ಪಿ. ಮಾಧವರಾಯರು ಸ್ಪೆಷಿಯಲ್ ಕೆಲಸದಮೇಲೆ ಯಿರುವ ಪರ್ಯಂತ ಯಾ ಮತ್ತೊದು ಹುಕುಂ ಕೊಡುವ ವರಿಗೂ ತಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯರ್. ಚಲುವಯ್ಯಂಗಾರ್ರು ತಿವಮೊಗ್ಗಾ ಡಿಸ್ಟ್ರಿಕ್ಟಿನ ಚಾರ್ಜನ್ನ ವಹಿಸಿರತಕ್ಕದ್ದಲ್ಲದೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ತಾರೀಖು 16ನೇ ಅಕ್ಟೋಬರ್ 1889.

ನಂ. 212.—(1888ನೇ ಇಸವಿಯ IVನೇ ರೆಗ್ಯೂಲೇಷನಂಬ) ಮೈಸೂರ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಕಲಮನುಸರಿಸಿ ಅನೆಕಲ್‌ನಲ್ಲಿರುವ ಲಿಂಗಾಯತ ಮಟಕ್ಕೆ ಕೇರಿದ ಕಾಯಂಗುತ್ತಾ ಹನ್ನೆಕ್ಕೆ ವ ರಾಜಾಪುರ ಈ ಯರಡು ಗ್ರಾಮಗಳಿಗೂ ಸದರೀ ಕೋಡಿನ 8 ವ 9ನೇ ಚಾಪ್ಟರುಗಳ ನಿಬಂಧನೆಗಳು ವ್ಯಾಪಿಸತಕ್ಕದ್ದೆಂದು ಮೈಸೂರ ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಣೆ ಕೊಡಿಸಿರುತ್ತಾರೆ.

ತಾರೀಖು 19ನೇ ಅಕ್ಟೋಬರ್ 1889.

ನಂ. 216.—ಸಕಲ ಜನಗಳಿಗೂ ತಿಳಿಯುವಬ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳೂ ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳವಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾನ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ಪ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ವೇಪೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮ್ಮಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸ್ವಾಧೀನ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಪರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ತಾಲ್ಲೂಕ್	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜು ಹುಟ್ಟುವಳೀ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ಯೆಪ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗ್ಗೈರೇ.
				ಎಕರೆ. ಗುಂ.	ರೂ ಆ. ಪೈ.	ರೂ ಆ. ಪೈ.	ರೂ. ಆ. ಪೈ.	
ನಂಜನಗೂಡು	ನಂಜನಗೂಡು	ತಿಮ್ಮನಾಯಕ ನಾರಣಸಂಡಿತ ನಹಳ್ಳಿ ಜೋಡಿ ವಗ್ಗೈರೆ	ಗ್ರಾಮ	390 96	255 0 0	116 6 2	148 13 7 ಮತ್ತು ಬಡ್ಡಿ	ಸ್ರ್ 1889ನೇ ಇಸವಿ ನವಂಬರ್ ತಾರೀಖು 18ರಲ್ಲು ಹಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ ರೂಬರೂ.
ನಂಜನಗೂಡು	ನಂಜಲೂರು	ತಿಮ್ಮನಾಯಕ ಕೂಸಾಚಾರ್ಯು ನಹಳ್ಳಿ ಜೋಡಿ ವಗ್ಗೈರೇರು	ಗ್ರಾಮ	118 77	84 0 0	49 1 4	136 7 8 ಮತ್ತು ಬಡ್ಡಿ	ಡಿಟೋ ಡಿಟೋ 20ರಲ್ಲು ಡಿಟೋ
ಹೆಚ್.ಡಿ. ಕೋಟೆ	ಮುಳ್ಳೂರು ನೆಲ್ಲಿಸಾಯಿಕನಹಳ್ಳಿ	ಜಯಪಲ್ಲಿ ಜೋಡಿಗ್ರಾಮ	ಕಲ್ಯಾಣಿ ಕೃಷ್ಣಾಚಾರ್, ಭೀಮಾಚಾರ್, ನಾರಾಯಣರಾವ್ ವಗ್ಗೈರೇರು	ಬಂ. ಕೂ. ಪ. 55 10 12½	66 7 3	56 6 8	125 1 0 ಮತ್ತು ಬಡ್ಡಿ	ಡಿಟೋ ಡಿಟೋ
ಚಿಕ್ಕಬಳ್ಳಾಪುರ	ಚಿಂತಾಮಣಿ ಪೆದ್ದಪಲ್ಲಿ ಪೆದ್ದಪಲ್ಲಿ ಸಾಗರ	ಗೊಲ್ಲವಾರಹಳ್ಳಿ ಜೋಡಿಗ್ರಾಮ	ಸುಬ್ಬಾಶಾಸ್ತ್ರಿ ವಗ್ಗೈರೇರು	9 5 0	148 3 1	152 12 0	644 5 6 ಮತ್ತು ಬಡ್ಡಿ	ಡಿಟೋ ಡಿಟೋ

ಪರಾ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತಮ್ಮಾಂ ಹಿಡುವಳಿಗಳಿಗೂ ದೇಣಿಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುದಿಲ್ಲ.

ಹುಕುಂ ಬಮೋಜಿಬ್,
ಆರ್. ವಿಜಯೀಂದ್ರರಾವ್,